**3**

ಅವನಿಗೆ ಗಳಿಗೆಗೊಮ್ಮೆ ತಾನು ರೆಡ್ ಇಂಡಿಯನ್‌ನೆಂದು ನೆನಪಾಗುತ್ತಿತ್ತು ಮತ್ತು ತನ್ನ ಕೋಲಿನ ರೈಫಲನ್ನು ಹಿಡಿದುಕೊಂಡು ಅವನು ಗುಹೆಯ ದ್ವಾರದ ಬಳಿ ಓಡುತ್ತಿದ್ದ. ಕಾರ್ಗತ್ತಲಿನಲ್ಲಿ ರೈಫಲನ್ನು ಗುರಿ ಹಿಡಿದು ರೆಡ್ ಇಂಡಿಯನ್ಸ್‌ರಂತೆಯೇ ಹುಯಿಲಿಡುತ್ತಿದ್ದ. ಅದನ್ನು ಕೇಳುತ್ತಿದ್ದಂತೆ ಹ್ಯಾಂಕ್, ಉರುಫ್ ಬಿಲ್ಲ್, ಒಮ್ಮೆಲೇ ಚಳಿ ಬಂದಂತೆ ಮೈ ಕೊಡವುತ್ತಿದ್ದ. ಶುರುವಿನಲ್ಲೇ ಹುಡುಗ ಬಿಲ್ಲನೊಳಗೆ ಭೀತಿಯನ್ನು ತುಂಬಿಸಿದ್ದ.

'ರೆಡ್ ಇಂಡಿಯನ್ ಚೀಫ್, ನಿಮಗೆ ಮನೆಗೆ ಹೋಗಬೇಕೆಂದೆನಿಸುತ್ತಿದೆಯೇ?' ನಾನು ಕೇಳಿದೆ.

'ಮನೆ?!... ಅಲ್ಲೇನೂ ಮಜಾ ಇಲ್ಲ!... ಆ ದರಿದ್ರ ಸ್ಕೂಲು ಯಾವನಿಗ್ಬೇಕು?... ಸ್ನೇಕ್–ಐ, ಇಲ್ಲಿ ನನಗೆ ಬಹಳ ಇಷ್ಟ ಆಗ್ತಿದೆ... ನನಗೆ ಆ ಸುಡುಗಾಡಿಗೆ ಕಳುಹಿಸೋಲ್ಲ ತಾನೆ?' ಅವನು ಅಳು ಮೋರೆ ಮಾಡುತ್ತಾ ಕೇಳಿದ.

'ಇಷ್ಟು ಬೇಗ ಅಂತೂ ಇಲ್ಲ ಕಣಪ್ಪ. ಕೆಲವು ದಿನಗಳು ಕಳೆಯಲಿ...' ನಾನೆಂದೆ.

'ವ್ಹಾ! ಇಷ್ಟೊಂದು ಮಜಾ ಯಾವತ್ತೂ ಸಿಕ್ಕಿರಲಿಲ್ಲ!...'

'ಸುಮಾರು ಹನ್ನೊಂದು ಗಂಟೆಗೆ ನಾವು ಮಲಗಲು ಅಣಿಯಾದೆವು. ಕಂಬಳಿಯೊಂದನ್ನು ಹಾಸಿ ನಮ್ಮ ಮಧ್ಯೆ ರೆಡ್ ಇಂಡಿಯನ್ ಯಜಮಾನನನ್ನು ಮಲಗಿಸಿದೆವು. ಅವನು ತಪ್ಪಿಸಿಕೊಂಡು ಹೋಗುತ್ತಾನೆಂದು ನಮಗೆ ಕಿಂಚಿತ್ತೂ ಹೆದರಿಕೆಯಿರಲಿಲ್ಲ. ಮುಂದಿನ ಮೂರು ಗಂಟೆಗಳಲ್ಲಿ ಅವನು ನಮ್ಮನ್ನು ತುಸುವೂ ಮಲಗಲು ಬಿಡಲಿಲ್ಲ. ಗಳಿಗೆಗೊಮ್ಮೆ ಎದ್ದು ತನ್ನ ಕೋಲಿನ ರೈಫಲಿನಿಂದ ನಮ್ಮ ಮೇಲೆ ಗುಂಡಿನ ಮಳೆಗರೆಯುತ್ತಿದ್ದ. ಹೇಗೋ ಕೊನೆಗೊಮ್ಮೆ ನನಗೆ ಕಣ್ಣುಗಳು ತಡೆಯಲಾರದಷ್ಟು ಭಾರವಾಗತೊಡಗಿದವು. ಮಂಪರು ನಿದ್ದೆ ಆವರಿಸತೊಡಗಿತು. ಅದರೊಳಗೂ ದುಃಸ್ವಪ್ನಗಳು. ಕೆಂಗೂದಲಿನ ಒಬ್ಬ ಕುರೂಪಿ ಕಡಲುಗಳ್ಳ ನನ್ನನ್ನು ಅಪಹರಿಸಿ ಒಂದು ಕಂಬಕ್ಕೆ ಕಟ್ಟಿ ಹಾಕಿದಂತೆ...

ಬೆಳ್ಳಂಬೆಳಗ್ಗೆ ಬಿಲ್ಲನ ಆಕ್ರಂದನ ಕೇಳಿ ನಾನು ಹಠಾತ್ತನೆ ಎದ್ದು ಕುಳಿತೆ. ರೆಡ್ ಇಂಡಿಯನ್ ಯಜಮಾನ ಬಿಲ್ಲನ ಎದೆಯನ್ನೇರಿ ಕುಳಿತುಕೊಂಡಿರುವುದು ಕಾಣಿಸಿತು. ಅವನ ಎಡಗೈಯ ಮುಷ್ಟಿಯಲ್ಲಿ ಬಿಲ್ಲನ ಒಂದು ಹಿಡಿ ತಲೆಗೂದಲಿತ್ತು! ಬಲಗೈಯಲ್ಲಿ ನಾವು ಬೇಕನ್ ಕತ್ತರಿಸುವ ಚೂರಿಯಿತ್ತು! ಹಿಂದಿನ ಸಂಜೆ ತೀರ್ಮಾನಿಸಿದಂತೆ ಅವನು ಬಿಲ್ಲನ ತಲೆಯನ್ನು ಕತ್ತರಿಸಲು ಹೊರಟಿದ್ದ!...

**4**

ಅವನ ಕೈಯಿಂದ ಚೂರಿಯನ್ನು ಬಿಡಿಸಿ ಅವನು ಮತ್ತೆ ನಿದ್ದೆ ಹೋಗುವಂತೆ ಮಾಡಲು ನಾನು ಕೊನೆಗೂ ಯಶಸ್ವಿಯಾದೆ. ಆದರೆ, ಆ ಗಳಿಗೆಯಿಂದ ಬಿಲ್‌ನ ಉತ್ಸಾಹ ತೂತಾದ ಬಲೂನಿನಂತೆ ಇಳಿಯತೊಡಗಿತು. ಅವನು ಮಗ್ಗಲು ಬದಲಿಸಿ ನಿದ್ದೆ ಹೋದವನಂತೆ ನಟಿಸಿದರೂ, ಹುಡುಗ ನಮ್ಮ ಮಧ್ಯೆ ಇರುವವರೆಗೂ ಪಾಪ ಶಾಂತಿಯಿಂದ ಕಣ್ಣು ರೆಪ್ಪೆ ಮುಚ್ಚಲಿಲ್ಲ. ಹುಡುಗ ಅವನಿಗೆ ಸಿಂಹಸ್ವಪ್ನದಂತೆ ಕಾಡಲಾರಂಭಿಸಿದ್ದ. ನಾನು ನಿದ್ದೆ ಹೋಗಲು ಚಡಪಡಿಸುತ್ತಿದ್ದೆನಾದರೂ ಹಠಾತ್ತನೆ ಬೆಳಗಿನ ಜಾವ ರೆಡ್ ಇಂಡಿಯನ್ ಚೀಫ್ ನನ್ನನ್ನು ಕಂಬಕ್ಕೆ ಕಟ್ಟಿ ಸುಡುವ ಫರ್ಮಾನು ಹೊರಡಿಸಿದ್ದು ಜ್ಞಾಪಕಕ್ಕೆ ಬಂದು ನನ್ನ ನಿದ್ದೆ ಹಾರಿ ಹೋಯಿತು. ಎದ್ದು ಕುಳಿತು ಒಂದು ಕಲ್ಲಿಗೊರಗಿ ನಾನು ಪೈಪನ್ನು ಹೊತ್ತಿಸಿದೆ.